# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 29 |
| ಮಾನ್ಯ ವಿಧಾನ ಸಭಾ ಸದಸ್ಯರ ಹೆಸರು | : | ಶ್ರೀ ಪ್ರಾಣೇಶ ಎಂ.ಕೆ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.12.2018. |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯಾದಾದ್ಯಂತ ಕಾರ್ಯನಿರ್ವಹಿಸುತ್ತಿರುವ 27 ಅಂಗವಿಕಲರ ಶಾಲೆಗಳ ಒಟ್ಟು 321 ಉದ್ಯೋಗಿಗಳಿಗೆ ನಿವೃತ್ತಿ ವೇತನ ಸೌಲಭ್ಯ ಮತ್ತು ಹೆಚ್.ಆರ್.ಎಂ.ಎಸ್. ಸೌಲಭ್ಯವನ್ನು ಒದಗಿಸಬೇಕೆಂದು ಸರ್ಕಾರದ ಆದೇಶವಿದ್ದರೂ ಸಹ ಕಾರ್ಯಗತವಾಗಿಲ್ಲದಿರಲು ಕಾರಣಗಳೇನು: (ವಿವರದೊಂದಿಗೆ ಸರ್ಕಾರದ ಆದೇಶ ಪ್ರತಿ ಒದಗಿಸುವುದು) | ಅ) ಹೆಚ್.ಆರ್.ಎಂ.ಎಸ್ ಸೌಲಭ್ಯವನ್ನು ಇಲಾಖಾ ವ್ಯಾಪ್ತಿಯೊಳಗೆ ಬರುವ ಎಲ್ಲ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಯ ಅಧಿಕಾರಿ/ ಸಿಬ್ಬಂದಿಯವರಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಬಳಸಲು ಸರ್ಕಾರದ ಸೂಚನೆ ಇರುತ್ತದೆ.<br>ಆ) ಆದರೆ, ಹೆಚ್.ಆರ್.ಎಂ.ಎಸ್. ಪೋರ್ಟಲ್‌ನಲ್ಲಿ ಪ್ರತಿಯೊಂದು ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ, ಸದರಿ ಹುದ್ದೆ ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡು ಸರ್ಕಾರದಿಂದ ಮಂಜೂರಾಗಿರುವ ಬಗ್ಗೆ ಸರ್ಕಾರದ ಆದೇಶದ ವಿವರಗಳು ಹಾಗೂ ಸರ್ಕಾರದ ಆದೇಶದ ಪ್ರತಿಯನ್ನು ಅಪ್‌ಲೋಡ್ ಮಾಡಿದಲ್ಲಿ ಮಾತ್ರ ಹೆಚ್.ಆರ್.ಎಂ.ಎಸ್. ಪೋರ್ಟಲ್ ಅಂತಹ ಸಿಬ್ಬಂದಿಗೆ ಹೆಚ್.ಆರ್.ಎಂ.ಎಸ್. ಗೆ ಒಳಪಡಲು ಅಂಗೀಕರಿಸುತ್ತದೆ.<br><br>ಇ) ಈ ಇಲಾಖೆಯಡಿಯಲ್ಲಿ 1982 ಅನುದಾನ ಸಂಹಿತೆಯಡಿಯಲ್ಲಿ ಒಟ್ಟು 34 ಖಾಸಗಿ ಶಾಲೆಗಳು ಕರ್ತವ್ಯ ನಿರ್ವಹಿಸುತ್ತಿವೆ. ಇದರಲ್ಲಿ ಕೇವಲ 7 ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳು ಮಾತ್ರ ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡು ಸರ್ಕಾರದ ಅನುಮೋದನೆ ಪಡೆದಿರುವ ಹುದ್ದೆಗಳಾಗಿರುತ್ತವೆ. ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡು ಸರ್ಕಾರದಿಂದ ಆದೇಶವಾಗಿರುವ ಪ್ರಕರಣಗಳಲ್ಲಿ, ಅಂತಹ ಹುದ್ದೆಗಳಿಗೆ ಹೆಚ್.ಆರ್.ಎಂ.ಎಸ್. ಗೆ ಅಳವಡಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಕೆಲವೇ ದಿನಗಳಲ್ಲಿ ಪೂರ್ಣಗೊಳಿಸಲಾಗುವುದು.<br><br>ಈ) ಉಳಿದ 27 ವಿಶೇಷ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಒಂದು ಬಾರಿಗೆ ಮೀಸಲಾತಿಯಲ್ಲಿ ವಿನಾಯಿತಿ ನೀಡುವ ಬಗ್ಗೆ ಪ್ರಕಿಯೆಯು ಚಾಲ್ತಿಯಲ್ಲಿದೆ. |
| ಆ | 27 ಅಂಗವಿಕಲರ ಶಾಲೆಗಳ ಒಟ್ಟು 321 ಉದ್ಯೋಗಿಗಳಿಗೆ ನಿವೃತ್ತಿ ವೇತನ ಸೌಲಭ್ಯ ಮತ್ತು ಹೆಚ್.ಆರ್.ಎಂ.ಎಸ್. ಸೌಲಭ್ಯವನ್ನು ಒದಗಿಸುವ ಉದ್ದೇಶ ಸರ್ಕಾರದ ಮುಂದಿದೆಯೇ: ಹಾಗಿದ್ದಲ್ಲಿ ಯಾವಾಗ ನೀಡಲಾಗುವುದು: (ವಿವರ ನೀಡುವುದು) | ಪ್ರಸ್ತಾವನೆಯು ನಿಯಮಾನುಸಾರ ಸಮಾಜ ಕಲ್ಯಾಣ ಇಲಾಖೆಯ ಪರಿಶೀಲನೆಯಲ್ಲಿದ್ದು, ಅಭಿಪ್ರಾಯ/ ಅನುಮೋದನೆ ನಿರೀಕ್ಷಿಸಲಾಗಿದೆ. 27 ಶಾಲೆಗಳ ಸಿಬ್ಬಂದಿ /ನಿವೃತ್ತಿ ಸಿಬ್ಬಂದಿಗಳ ಮಾಹಿತಿಯ ಸಮಗ್ರ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ. |
| ಇ | 27 ಶಾಲೆಗಳ ಸುಮಾರು 2000 ಅಂಗವಿಕಲ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆ | ಸರ್ಕಾರದ ಆದೇಶ ಸಂಖ್ಯೆ, ಇಪಿ 204 ಎಂಎಂಎಸ್ 2018 ದಿ. 27/10/2018 ರಲ್ಲಿ (ಶಿಕ್ಷಣ ಇಲಾಖೆ) 01ನೇ ನವೆಂಬರ್ 2018ರಿಂದ |

<table>
<tr><td></td><td>ವಿಸ್ತಾರಗೊಂಡಿರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಮಕ್ಕಳಿಗೆ ಯಾವಾಗ ಕ್ಷೀರಭಾಗ್ಯ ಯೋಜನೆ ನೀಡಲಾಗುವುದು: (ವಿವರ ನೀಡುವುದು)</td><td>ಜಾರಿಗೆ ಬರುವಂತೆ ರಾಜ್ಯ ಅನುದಾನ ಸಂಹಿತೆ 1982ರಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಾಲೆಗಳಿಗೆ ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ 5 ದಿನಗಳ ಉಚಿತ ಹಾಲು ವಿತರಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಅನುಮತಿ ನೀಡಿ ಆದೇಶಿಸಿರುತ್ತಾರೆ. ಈ ಯೋಜನೆ ಮೇಲಿನ ಎಲ್ಲಾ ಶಾಲೆಗಳಿಗೆ ಜಾರಿಗೊಂಡಿರುತ್ತದೆ.</td></tr>
<tr><td>ಈ</td><td>ಪ್ರಸ್ತುತ ಇಂತಹ ಶಾಲೆಗಳ ಸಾದಿಲ್ವಾರು ನಿರ್ವಹಣೆಗಾಗಿ ವಾರ್ಷಿಕ ಎಷ್ಟು ಅನುದಾನ ನೀಡಲಾಗುತ್ತದೆ. ಈ ಅನುದಾನವನ್ನು ಕನಿಷ್ಠ ಒಂದು ಲಕ್ಷಕ್ಕೆ ಏರಿಕೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ: ಹಾಗಿದ್ದಲ್ಲಿ, ಯಾವಾಗ ಏರಿಕೆ ಮಾಡಲಾಗುವುದು? (ವಿವರ ನೀಡುವುದು)</td><td>ರಾಜ್ಯ ಅನುದಾನ ಸಂಹಿತೆ 1982ರಡಿ ನಿಯಮ 22 ರಂತೆ ಪ್ರಸ್ತುತ ಶಾಲೆಗಳಲ್ಲಿನ ಸಾದಿಲ್ವಾರು ನಿರ್ವಹಣೆಗಾಗಿ ಅನುದಾನವನ್ನು ನಿಯಮ 22 ರಂತೆ ನೀಡಲಾಗುತ್ತಿದೆ.
<table>
<tr><th>Sl No</th><th>Category</th><th>Item</th></tr>
<tr><td>1</td><td>Class-room Furniture</td><td>Chair, Table, Almarah, Black, board, Cabinet Amplifier in case of Deaf Institution, Teachers table and Chairs.</td></tr>
<tr><td>2</td><td>Office furniture</td><td>Table & Chair for clerical staff visitors stool, Almarah and file cabinet.</td></tr>
<tr><td>3</td><td>Stationery and Printing</td><td>50% of the expenditure limited to maximum of Rs.1000 per year.</td></tr>
<tr><td>4</td><td>Postage</td><td>50% expenditure subject to maximum of Rs.150% per year</td></tr>
<tr><td>5</td><td>Electricity</td><td>Rs.1000 for Deaf institution Rs.500 for other institution</td></tr>
<tr><td>6</td><td>General Expenditure Including broad items</td><td>50% expenditure subject to a limitation of Rs.1000 per year</td></tr>
<tr><td>7</td><td>Crafts and Library</td><td>50% of the expenditure subject to a limitation of Rs.1000 per year</td></tr>
<tr><td>8</td><td>Maintenance of building</td><td>50% of the expenditure, subject to a maximum of 1500/- per year if it is having own buildings</td></tr>
<tr><td>9</td><td>Books</td><td>To provide books worth Rs.500 per annum.</td></tr>
<tr><td>10</td><td>Rent of building</td><td>50% if actual rent paid subject to the maximum of 1000 per year</td></tr>
<tr><td>11</td><td>Special</td><td>As certified by the</td></tr>
</table></td></tr>
</table>